# ತ್ಯಾಗಮೂರ್ತಿ ಶ್ರೀರಾಮಕೃಷ್ಣ

[ಇತಿಹಾಸದಲ್ಲಿನ ಅವತಾರ ಪುರುಷರಲ್ಲಿ, ಮುಖ್ಯವಾಗಿ ಶ್ರೀರಾಮಕೃಷ್ಣರಲ್ಲಿ, ಕಂಡುಬರುವ ತ್ಯಾಗ ಹಾಗೂ ಪರಧರ್ಮಗಳಲ್ಲಿ ಗೌರವ ಇವು ಆಧುನಿಕ ಯುಗಕ್ಕೆ ತೀರ ಪ್ರಸ್ತುತವೆಂದು ಹೋದ ತಿಂಗಳ ಸಂಪಾದಕೀಯದಲ್ಲಿ ತಿಳಿಸಲಾಗಿತ್ತು. ಅವರ ವ್ಯಕ್ತಿತ್ವದಲ್ಲಿ ಬೇರೂರಿದ್ದ ಈ ಮಹಾನ್ ಗುಣಗಳು ಪರಿಪೂರ್ಣತೆಯನ್ನು ಹೇಗೆ ಪಡೆದವು ಎಂಬುದರ ವಿಶ್ಲೇಷಣೆಯನ್ನು ಮುಂದುವರೆಸಲಾಗಿದೆ.]

ಶ್ರೀರಾಮಕೃಷ್ಣರ ಅಸಾಧಾರಣ ಜೀವನವನ್ನು ಅಧ್ಯಯನ ಮಾಡಿದವರಿಗೆಲ್ಲ ಅವರ ವ್ಯಕ್ತಿತ್ವಕ್ಕೆ ಪುಷ್ಟಿ ನೀಡಿದ ಮಹಾನ್ ಗುಣಗಳ ಒಂದು ಸಮಷ್ಟಿಯೇ ಪರಿಚಯವಾಗುತ್ತದೆ. 'ಅನಂತ ಭಾವಮಯ', 'ಅನಂತ ಗುಣಮಯ' ಎಂದು ಅವರನ್ನು ಅವರ ನೇರ ಶಿಷ್ಯರೇ ವರ್ಣಿಸಿದ್ದಾರೆ. ಚಿಂತಕರ ಮನಸ್ಸನ್ನು ಆಕರ್ಷಿಸುವ ಅವರ ವಿಶಾಲ ಮನೋಭಾವ ಒಂದೆಡೆಯಾದರೆ ಆಧ್ಯಾತ್ಮಿಕ ಸಾಧಕರಿಗೆ ಬೋಧಕವಾಗಿರುವ ಅವರ ತೀವ್ರ ವೈರಾಗ್ಯ, ವ್ಯಾಕುಲತೆಗಳು ಮತ್ತೊಂದೆಡೆ ಗಮನ ಸೆಳೆಯುತ್ತವೆ. ಅವರ ಜೀವನದ ಪ್ರಧಾನ ಅಂಶ ಯಾವುದು ಎಂದು ಹಲವು ಬಾರಿ ಆಲೋಚಿಸಿದಾಗ ಪ್ರತಿಯೊಂದು ವಿಷಯವೂ (ಗುಣವೂ) ಅವರಲ್ಲಿ ಪರಿಪೂರ್ಣತೆಯನ್ನು ಪಡೆಯುವುದನ್ನು ಕಾಣುತ್ತೇವೆ. ಯಾವುದೇ ದಿಕ್ಕಿನಿಂದ ನೋಡಿದರೂ ವೃತ್ತವು ಒಂದೇ ರೀತಿಯಾಗಿ ಗೋಚರಿಸುವಂತೆ ಅವರ ವ್ಯಕ್ತಿತ್ವದ ಯಾವುದೇ ಒಂದು ಅಂಶವನ್ನು ತೆಗೆದುಕೊಂಡು ಅಧ್ಯಯನ ಮಾಡಿದರೂ ಅದು ನಮ್ಮನ್ನು ಪೂರ್ಣತ್ವದ ಕಡೆಗೇ ಕೊಂಡೊಯ್ಯುತ್ತದೆ. ಎಲ್ಲ ಗುಣಗಳೂ, ಮೌಲ್ಯಗಳೂ ಮಿಳಿತಗೊಂಡು ಸತ್ಯದ ವಿವಿಧ ಮುಖಗಳಂತೆ ಅವರಲ್ಲಿ ಅಭಿವ್ಯಕ್ತವಾಗುವುದನ್ನು ಕಾಣುತ್ತೇವೆ. ಶ್ರೀಮಾತೆ ಶಾರದಾದೇವಿ ಹೇಳುತ್ತಾರೆ: "ತ್ಯಾಗವೇ ಅವರ ಜೀವನದ ಪ್ರಮುಖ ಅಂಶ. ಅಂತಹ ತ್ಯಾಗವನ್ನು ಬೇರೆಲ್ಲಿಯೂ ಕಾಣಲಾಗದು." ಶ್ರೀರಾಮಕೃಷ್ಣರ ಈ ಅಸಾಧಾರಣ ತ್ಯಾಗವನ್ನು ಕುರಿತು ಭಾವಿಸಿ, ಸ್ವಾಮಿ ವಿವೇಕಾನಂದರು ಅವರನ್ನು 'ತ್ಯಾಗೀಶ್ವರ' ಎಂದು ಆರಾತ್ರಿಕ ಸ್ತೋತ್ರದಲ್ಲಿ ಸ್ತುತಿಸಿದ್ದಾರೆ. ಸ್ವಾಮಿ ಅಭೇದಾನಂದರೂ ಕೂಡ ಶ್ರೀರಾಮಕೃಷ್ಣರನ್ನು ಸ್ತುತಿಸುತ್ತ ಹೇಳುತ್ತಾರೆ: 'ತವ ತ್ಯಾಗಮ್ ಅದೃಷ್ಟಪೂರ್ವಮ್'—'ಹಿಂದೆಂದೂ ಕಂಡರಿಯದಂತಹ ತ್ಯಾಗ ತಮ್ಮದು.' ತ್ಯಾಗದ ಪರಾಕಾಷ್ಠೆಯನ್ನು ತಲುಪಿದ್ದ ಶ್ರೀರಾಮಕೃಷ್ಣರ ಜೀವನ ತ್ಯಾಗದ ವಿವಿಧ ಮಜಲುಗಳನ್ನು ಅರ್ಥಮಾಡಿಕೊಳ್ಳಲು ನೆರವಾಗುತ್ತದೆ.

**ತ್ಯಾಗ ಎಂದರೇನು?**

ತ್ಯಾಗ ಎಂಬ ಪದವನ್ನು ಕೇಳಿದಕೂಡಲೆ ಸಾಮಾನ್ಯವಾಗಿ ಏನನ್ನೋ ಕಳೆದುಕೊಳ್ಳುವುದು ಎಂಬ ಭಾವನೆ ಮೂಡುತ್ತದೆ. ತ್ಯಾಗವೇ ದುಃಖವೆಂದು ಭಾವಿಸಿ ಮಾನವ, ವಸ್ತು ಹಾಗೂ ವ್ಯಕ್ತಿಗಳ ಮೇಲಿನ ತನ್ನ ವ್ಯಾಮೋಹವನ್ನು ವ್ಯಕ್ತಪಡಿಸುತ್ತಾನೆ. ಮಕ್ಕಳನ್ನು ಬೆಳೆಸಿ ಅವರ ವ್ಯಕ್ತಿತ್ವ ಸ್ವತಂತ್ರವಾಗಿ ರೂಪುಗೊಳ್ಳುವಂತೆ ಬೇಕಾದ ಶಿಕ್ಷಣ ನೀಡುವಲ್ಲಿ ತಂದೆತಾಯಿಗಳು ತ್ಯಾಗವನ್ನು ಅಭ್ಯಾಸಮಾಡುತ್ತಾರೆ. ಸಂಸಾರದಲ್ಲಿ ಒಬ್ಬರಿಗೊಬ್ಬರು ಹೊಂದಿಕೊಂಡು ಇತರರ ಅಭಿಪ್ರಾಯ, ಆಸೆ-ಆಕಾಂಕ್ಷೆಗಳಿಗೆ ಮಾನ್ಯತೆ ನೀಡಿ ತಮ್ಮನ್ನು ನಿಯಂತ್ರಿಸಿಕೊಳ್ಳುವುದರಲ್ಲಿ ತ್ಯಾಗವಿದೆ. ಪರಿಚಯವೇ ಇಲ್ಲದ ಎರಡು ಜೀವಿಗಳು ಸತಿ-ಪತಿಗಳಾಗಿ ಒಂದಾಗಿ ಬಾಳುವುದೂ ಈ ತ್ಯಾಗದ ಪ್ರಭಾವದಿಂದಲೇ. ಗುರು ತಾನು ಕಲಿತಿರುವ ವಿದ್ಯೆಯನ್ನು ಶಿಷ್ಯನಿಗೆ ತಿಳಿಸುವುದೂ ಈ ತ್ಯಾಗದ ಪ್ರೇರಣೆಯಿಂದಲೇ. ಮುಕ್ತವಾಗಿ ದಾನ ಕೊಡುವುದರಲ್ಲೂ ತ್ಯಾಗವಿದೆ. ಕೊಡುವ-ಬಿಡುವ ಮುನ್ನ ಆ ವಸ್ತು ಅಥವಾ ವ್ಯಕ್ತಿಯಲ್ಲಿನ ಸ್ವಾರ್ಥ ಅಥವಾ ಆಸಕ್ತಿಯನ್ನು ತ್ಯಜಿಸುತ್ತೇವೆ. ಇದೇ ತ್ಯಾಗ. ಈ ತ್ಯಾಗಕ್ಕೆ ಪ್ರೀತಿ, ಪ್ರೇಮ, ದಯೆ, ಭಕ್ತಿ, ಜ್ಞಾನಗಳು ಕಾರಣವಾಗಿರಬಹುದು. ಯಾವಾಗಲೂ ಗಮನಿಸಬೇಕಾದ ವಿಷಯವೆಂದರೆ ಯಾವುದೋ ಒಂದು ವಸ್ತು, ಗುಣ ಅಥವಾ ವ್ಯಕ್ತಿಗಾಗಿ ಮತ್ತೊಂದನ್ನು ನಾವು ತ್ಯಾಗ ಮಾಡುತ್ತೇವೆ. ಈ ಪ್ರಕ್ರಿಯೆ ಸದಾ ನಡೆಯುತ್ತಲೇ ಇರುತ್ತದೆ.

**ಪ್ರಕೃತಿಯ ನಿಯಮ ತ್ಯಾಗ**

ಒಂದು ಬೀಜ ಗಿಡವಾಗಿ ಬೆಳೆಯಬೇಕಾದರೆ ತನ್ನಲ್ಲಿರುವ ದಳಗಳನ್ನು ಬೆಳೆಯುತ್ತಿರುವ ಮೊಳಕೆಗೆ ಆಹಾರವಾಗಿ ನೀಡಿ ತಾನು ಸಾಯುತ್ತದೆ. ಒಂದು ಹಣ್ಣನ್ನು ತಯಾರುಮಾಡಲು ಗಿಡ ನೂರಾರು ಹೂವುಗಳನ್ನು ತಯಾರು ಮಾಡುತ್ತದೆ. ಹಾಗೆ ಆದ ಹಣ್ಣುಗಳಲ್ಲಿ ಎಲ್ಲೋ ಒಂದೆರಡು ಪುನಃ ಮರಗಳಾಗಿ ಬೆಳೆಯುತ್ತವೆ. ಹೊಸ ಚಿಗುರು ಬರಬೇಕಾದರೆ ಹಳೆಯ ಎಲೆಗಳು ಉದುರಲೇ ಬೇಕು. ಸಂಸ್ಕರಿಸಿ ಬೆಳೆಸುವ ಗಿಡಗಳಲ್ಲಿ ಸರಿಯಾಗಿ ಕಾಯಿ ಕಚ್ಚಲು ತೋಟಗಾರ ಸಮಯಕ್ಕೆ ಸರಿಯಾಗಿ ಗಿಡಗಳ ಬೇಡದ ಅಂಶವನ್ನು ಕತ್ತರಿಸುತ್ತಾನೆ. ಮಾನವರಲ್ಲೂ ಕೂಡ ಇದನ್ನು ಕಾಣಬಹುದು. ಸಾವಿರಾರು ಜೀವಕಣಗಳು ಪ್ರತಿನಿತ್ಯ ಸತ್ತುಹೋಗಿ ಹೊಸ ಜೀವಕಣಗಳು ಅವುಗಳ ಸ್ಥಾನ, ಕಾರ್ಯಗಳನ್ನು ಮುಂದುವರೆಸುತ್ತವೆ. ಬಾಲ್ಯವನ್ನು ತ್ಯಜಿಸಿ ನಾವು ಯುವಕರಾಗುತ್ತೇವೆ, ಯೌವನವನ್ನು ತ್ಯಜಿಸಿ (ಇಚ್ಛೆಯಿಲ್ಲದಿದ್ದರೂ!) ವೃದ್ಧಾಪ್ಯವನ್ನು ಮುಟ್ಟುತ್ತೇವೆ. ಈ ವೃದ್ಧಾಪ್ಯವನ್ನು ತಲುಪುವುದು, ಸಾಯುವುದೂ ಕೂಡ, ಬೇರೆಯವರಿಗೆ ಅನುವು ಮಾಡಿಕೊಡಲು ತಾನೇ? ಇನ್ನು ಮನಸ್ಸಿನಲ್ಲಿ ನಾವು ಪ್ರತಿಕ್ಷಣ ಎಷ್ಟು ಆಲೋಚನೆ ಮತ್ತು ಭಾವನೆಗಳನ್ನು ತ್ಯಜಿಸಿ ಜೀವನವನ್ನು ರೂಪಿಸಿಕೊಳ್ಳುತ್ತೇವೆ! ನಮಗೆ ಬಾಲ್ಯದಿಂದ ಆದ ಎಲ್ಲ ಕಹಿ ಅನುಭವಗಳನ್ನು ಹಾಗೆಯೇ ಹಿಡಿ

ಬಿಟ್ಟುಕೊಂಡಿದ್ದರೆ ನಮ್ಮ ಮಾನಸಿಕ ಸ್ಥಿತಿ ಏನಾಗಬೇಡ! ಹಾಗೆ ತ್ಯಜಿಸಿ ಹೊರಬರಲು ಸಾಧ್ಯವಾಗದವರು ಖಿನ್ನತೆಯೇ ಮೊದಲಾದ ಮನಸ್ಸಿನ ಬೇನೆಗಳಿಂದ ನರಳುತ್ತಾರೆ. ಹೀಗೆ ಪ್ರಕೃತಿಯ ನಿಯಮವೇ ತ್ಯಾಗವೆಂದು ತಿಳಿಯಬಹುದು.

**ಆಸಕ್ತಿಯನ್ನು ಬಿಡುವುದೇ ತ್ಯಾಗ**

ಕೊಡುವ-ಬಿಡುವ ಮುನ್ನ ವಸ್ತು-ವ್ಯಕ್ತಿಗಳಲ್ಲಿನ ಆಸಕ್ತಿಯನ್ನು ತ್ಯಜಿಸಬೇಕು. ಆಸಕ್ತಿಯಿದ್ದಲ್ಲಿ ಬಯಕೆ ಹಾಗೂ ನನ್ನಿಂದ ಆ ವಸ್ತು ಅಥವಾ ವ್ಯಕ್ತಿ ದೂರವಾಗಬಾರದು ಎಂಬ ಭಾವನೆ ಉಂಟಾಗುತ್ತದೆ. ಸಂಸ್ಕೃತದಲ್ಲಿ 'ಸ್ನೇಹ' ಎಂಬ ಪದಕ್ಕೆ ಅಂಟು ಎಂಬ ಅರ್ಥವಿದೆ. ವ್ಯಕ್ತಿ ಹಾಗೂ ವಸ್ತುಗಳ ಮೇಲಿನ ಸ್ನೇಹ, ಸ್ವಾರ್ಥ ಆಸಕ್ತಿಯಿಂದ ಕೂಡಿದ್ದಾದರೆ ಅದು ಅಂಟಾಗಿ ಪರಿವರ್ತನೆಗೊಂಡು ನಮ್ಮ ವ್ಯಕ್ತಿತ್ವವನ್ನು ಕುಂಠಿತಗೊಳಿಸುತ್ತದೆ. ಈ ವಸ್ತು ಅಥವಾ ವ್ಯಕ್ತಿ ನನಗೆ ಸೇರಿದ್ದು, ನನ್ನದು ಎಂಬ ಭಾವನೆಯೇ ನಮ್ಮ ಪ್ರಗತಿಗೆ ಬಾಧಕ. ಇಂತಹ ಭಾವನೆಯಿಂದ "ನಾನು ಅಪೂರ್ಣ, ಈ ವಸ್ತು ಅಥವಾ ವ್ಯಕ್ತಿಯಿಲ್ಲದಿದ್ದರೆ ನಾನು ದುಃಖಿಯಾಗುತ್ತೇನೆ" ಎಂಬ ಚಿಂತೆ ನಮ್ಮನ್ನು ಕಾಡಲಾರಂಭಿಸುತ್ತದೆ. ಈ ಚಿಂತೆ, ಭಯಗಳೇ ದುಃಖಕ್ಕೆ ಕಾರಣವಾಗುತ್ತವೆ. ಆಧ್ಯಾತ್ಮಿಕ ಮಾರ್ಗದಲ್ಲಿ ಮುನ್ನಡೆಯಲು ಬಯಸುವ ವ್ಯಕ್ತಿ ಈ ವಸ್ತುಕೇಂದ್ರಿತ ಅಥವಾ ವ್ಯಕ್ತಿಕೇಂದ್ರಿತ ಆಸಕ್ತಿಯನ್ನು ಜಯಿಸಬೇಕು. ಆಗ ಮಾತ್ರ ತ್ಯಾಗ ಸಾಧ್ಯವಾಗುವುದು.

ಕಠೋಪನಿಷತ್ತಿನಲ್ಲಿ ನಚಿಕೇತನ ತಂದೆ ವಾಜಶ್ರವಸ್ಸು ವಿಶ್ವಜಿತ್ ಯಜ್ಞದಲ್ಲಿ ಎಲ್ಲವನ್ನೂ ದಾನ ಮಾಡಬೇಕೆಂಬ ನಿಯಮವಿದ್ದರೂ ವ್ಯಾಮೋಹದಿಂದ ಕೂಡಿದವನಾಗಿ ಉಪಯೋಗಕ್ಕೆ ಬಾರದ ಮುದಿ ಗೋವುಗಳನ್ನೇ ತ್ಯಾಗ ಮಾಡುತ್ತಿರುವುದನ್ನು ಕಂಡು ನಚಿಕೇತ ತನ್ನ ತಂದೆಯ ವಿವೇಕ ಬುದ್ಧಿಯನ್ನು ಜಾಗೃತಗೊಳಿಸಲು ಪ್ರಯತ್ನಿಸಿದ. ತಂದೆಗೆ ತನ್ನ ಆಸ್ತಿಯಲ್ಲಿ ಇದ್ದ ಆಸಕ್ತಿಯನ್ನು ಹೋಗಲಾಡಿಸುವುದರ ಮೂಲಕ ಪ್ರಜ್ಞೆಯನ್ನು ವಸ್ತು, ವ್ಯಕ್ತಿಗಳಿಂದ ಆತ್ಮದೆಡೆಗೆ ತಿರುಗಿಸುವುದೇ ಅವನ ಉದ್ದೇಶವಾಗಿತ್ತು. ಮಹಾಭಾರತದಲ್ಲಿ ಬರುವ ಯಯಾತಿಯ ದೃಷ್ಟಾಂತದಲ್ಲೂ ನಾವು ಈ ಆಸಕ್ತಿಯನ್ನು ಬಿಡುವುದು ಅನಿವಾರ್ಯ ಎಂಬ ಸತ್ಯವನ್ನು ಕಾಣುತ್ತೇವೆ.

ಆಸಕ್ತಿಯನ್ನು ತ್ಯಜಿಸುವುದು ಎಂದ ಮಾತ್ರಕ್ಕೆ ವಸ್ತು ಅಥವಾ ವ್ಯಕ್ತಿಗಳಿಂದ ದೂರವಿದ್ದು ಜೀವನವಿಮುಖನಾಗಬೇಕೆಂದು ಅರ್ಥವಲ್ಲ. ಕೇವಲ ವಸ್ತು ಅಥವಾ ವ್ಯಕ್ತಿಗಳಿಂದ ದೂರ ಉಳಿಯದೆ ಮನದಲ್ಲಿ ತ್ಯಾಗವನ್ನು ರೂಢಿಸಬೇಕು. ಮನಸ್ಸಿನಲ್ಲಿ ಇವುಗಳ ಸಂಗವನ್ನು ಉಳಿಸಿಕೊಂಡರೆ ನಾವು ಮಿಥ್ಯಾಚಾರಿಗಳಾಗುತ್ತೇವೆ ಎಂದು ಗೀತೆಯಲ್ಲಿ ಶ್ರೀಕೃಷ್ಣ ಹೇಳುತ್ತಾನೆ. ಮನಸ್ಸು ನೆಲೆನಿಂತಿರುವುದೇ ಆಲೋಚನೆ, ಭಾವನೆಗಳಲ್ಲಿ. ಒಂದು ಲೋಟದಲ್ಲಿರುವ ನೀರನ್ನು ಚೆಲ್ಲಿದರೆ ಕೂಡಲೇ ಅದರಲ್ಲಿ ಗಾಳಿ ತುಂಬುವಂತೆ ಮನಸ್ಸು ಖಾಲಿಯಿರಲಾರದು. ಮನಸ್ಸಿಗೆ ನಾವು ಉನ್ನತ ಧ್ಯೇಯವನ್ನು ನೀಡದೆ ವಿಷಯವಸ್ತುಗಳಿಂದ ಅದನ್ನು ಹಿಂದಕ್ಕೆಳೆಯುವುದು ಕಷ್ಟಸಾಧ್ಯ. ಆದ್ದರಿಂದ ತ್ಯಾಗದೊಂದಿಗೆ ಭಗವಂತನಲ್ಲಿ ಶ್ರದ್ಧೆ, ಪ್ರೀತಿಯಿರಬೇಕು. ಇದನ್ನೇ ಶ್ರೀರಾಮಕೃಷ್ಣರು ಅತ್ಯಂತ ಸರಳವಾಗಿ ಹೇಳುತ್ತಿದ್ದರು, "ವಿಷಯೇ ವಿರಾಗ್, ಈಶ್ವರೇ ಅನುರಾಗ್—ವಿಷಯ ವಸ್ತುಗಳಲ್ಲಿ ಅನಾಸಕ್ತಿ, ವೈರಾಗ್ಯ ಹಾಗೂ ಜೊತೆಜೊತೆಗೆ ಈಶ್ವರನಲ್ಲಿ ಪ್ರೀತಿ, ಅನುರಾಗ." ಇವೆರಡೂ ನಾಣ್ಯದ ಎರಡು ಅವಿಭಾಜ್ಯ ಮುಖಗಳಿದ್ದಂತೆ. ಹೀಗಿದ್ದಾಗ ಮಾತ್ರ ತ್ಯಾಗದಲ್ಲಿ, ದಾನದಲ್ಲಿ ಸಫಲತೆ, ಆನಂದವನ್ನು ಕಾಣಲು ಸಾಧ್ಯ. ಈಶ್ವರನಲ್ಲಿ ಪ್ರೀತಿ ಹಾಗೂ ಭಕ್ತಿ ಉಂಟಾದಾಗ ವಸ್ತು ಹಾಗೂ ವ್ಯಕ್ತಿಗಳ ಮೇಲಿನ ಆಸಕ್ತಿ ತುಚ್ಛವಾಗಿ ಕಂಡುಬರುತ್ತದೆ.

**ತ್ಯಾಗದಲ್ಲಿ ಆನಂದವಿದೆ**

ಶ್ರೀರಾಮಕೃಷ್ಣರು ವಸ್ತುಗಳ ಸಂಚಯವನ್ನು ಮಾಡುತ್ತಿರಲಿಲ್ಲ. ಅವರಲ್ಲಿ ಹೆಚ್ಚಾಗಿ ಬಟ್ಟೆಗಳೂ ಇರುತ್ತಿರಲಿಲ್ಲ. ಎಷ್ಟೋ ಬಾರಿ ಅವರ ಅರಿವೆ ಕಳಚಿ ಬಿದ್ದರೂ ಅವರಿಗೆ ಅದರ ಅರಿವೇ ಇರುತ್ತಿರಲಿಲ್ಲ. ಭಿಕಾರಿಗೂ ಏನೂ ಇರುವುದಿಲ್ಲ. ಆದರೂ ಅವನಿಗೆ ಆಸಕ್ತಿಯಿರುತ್ತದೆ — ಅಭಾವ, ಕೊರತೆಯ ದುಃಖವಿರುತ್ತದೆ. ಶ್ರೀರಾಮಕೃಷ್ಣರ ಸಾನ್ನಿಧ್ಯದ ಭಾಗ್ಯವನ್ನು ಪಡೆದಿದ್ದ ಗೃಹಸ್ಥಭಕ್ತರು, ಶಿಷ್ಯರು ಹಾಗೂ ಸಮಕಾಲೀನರೆಲ್ಲ ಇವರೊಂದಿಗೆ ಇರುತ್ತಿದ್ದಾಗ ತಾವು ಅನುಭವಿಸುತ್ತಿದ್ದ ಆನಂದದ ವರ್ಣನೆಯನ್ನು ಮಾಡಿದ್ದಾರೆ. ಒಮ್ಮೆಯಾದರೂ ಶ್ರೀರಾಮಕೃಷ್ಣರು ಮ್ಲಾನವದನರಾಗಿರುವುದನ್ನು, ಖಿನ್ನರಾಗಿರುವುದನ್ನು ಕಂಡವರಿಲ್ಲ. ಆನಂದದ ಬುಗ್ಗೆಯೇ ಅವರಲ್ಲಿ ಹರಿಯುತ್ತಿತ್ತೋ ಎನ್ನುವಂತೆ ಎಲ್ಲರಿಗೂ ತೋರುತ್ತಿತ್ತು. ಅವರ ಗೃಹಸ್ಥಶಿಷ್ಯ ಹಾಗೂ ಪ್ರಸಿದ್ಧ ನಾಟಕಕಾರ ಗಿರೀಶಚಂದ್ರ ಘೋಷನಿಗೆ ಇದನ್ನು ಕಂಡು ಆಶ್ಚರ್ಯವಾಗಿತ್ತು. ಎಲ್ಲ ಪ್ರಾಪಂಚಿಕ ಸುಖಗಳನ್ನೂ ಅನುಭವಿಸಿದ್ದರೂ ಇಂತಹ ಆನಂದ ತನ್ನದಾಗದಿದ್ದಾಗ ಈ ಬಡ ಬ್ರಾಹ್ಮಣ ಯಾವುದರ ಬಲದಿಂದ ಇಷ್ಟು ಸಂತೃಪ್ತನಾಗಿದ್ದಾನೆ ಎಂದು ವಿಚಾರ ಮಾಡುತ್ತ ಶ್ರೀರಾಮಕೃಷ್ಣರ ಮೋಡಿಯ ಬಲೆಗೆ ಸಿಲುಕಿಬಿದ್ದ.

ಬಡಕುಟುಂಬದಲ್ಲಿ ಜನಿಸಿದ್ದರೂ ಶ್ರೀರಾಮಕೃಷ್ಣರು ಪ್ರಾಪಂಚಿಕ ವಸ್ತುಗಳ ಬಗ್ಗೆ ಆಸಕ್ತಿಯನ್ನು ಬೆಳೆಸಿಕೊಳ್ಳಲಿಲ್ಲ. ಅವರ ಪ್ರಭಾವಕ್ಕೊಳಗಾಗಿದ್ದ ಮಥುರನಾಥ, ಸುರೇಂದ್ರರಂತಹ ಧನಿಕರಿಂದಲೂ ತಮಗಾಗಿ ಏನನ್ನೂ ಬಯಸಿದವರಲ್ಲ. ಒಂದು ಮಾತು ಹೇಳಿದರೆ ಅದು ಆದೇಶವೆಂದೇ ಭಾವಿಸುತ್ತಿದ್ದ ಆ ಭಕ್ತರಿಂದ ಅವರು ಕೇಳಿದ್ದನ್ನು ಪಡೆಯಬಹುದಿತ್ತು. ಆದರೆ ಶ್ರೀರಾಮಕೃಷ್ಣರ ಜೀವನದ ಲಕ್ಷ್ಯವೇ ಬೇರೆಯಾಗಿತ್ತು. ಅಯಸ್ಕಾಂತವು ಯಾವಾಗಲೂ ಉತ್ತರಾಭಿಮುಖವಾಗಿಯೇ ಇರುತ್ತದೆ. ಶ್ರೀರಾಮಕೃಷ್ಣರ ಮನಸ್ಸೂ ಅಂತೆಯೇ ಸದಾ ಭಗವಂತನಲ್ಲಿ ನೆಲೆ ನಿಂತಿತ್ತು. ಇಂತಹ ವ್ಯಕ್ತಿಗಳನ್ನು ಆತ್ಮತೃಪ್ತರು, ಆಪ್ತಕಾಮರು, ಅಕಾಮಹತರು ಎಂದು ಉಪನಿಷತ್ತು ಬಣ್ಣಿಸುತ್ತದೆ. ಭಗವದ್ಗೀತೆಯಲ್ಲಿ ಈ ಸ್ಥಿತಿಯನ್ನು ವಿವರಿಸುವ ಶ್ಲೋಕ ಹೀಗಿದೆ:

**ಬಾಹ್ಯಸ್ಪರ್ಶೇಷ್ವಸಕ್ತಾತ್ಮಾ ವಿಂದತ್ಯಾತ್ಮನಿ ಯತ್ಸುಖಮ್ ।**
**ಸ ಬ್ರಹ್ಮಯೋಗಯುಕ್ತಾತ್ಮಾ ಸುಖಮಕ್ಷಯಮಶ್ನುತೇ ॥** (೫.೨೧)

"ಶಬ್ದಾದಿ ಬಾಹ್ಯವಿಷಯಗಳಲ್ಲಿ ಆಸಕ್ತಿಯಿಲ್ಲದವನು ಅಂತಃಕರಣದಲ್ಲಿ (ವಿಷಯಜನಿತವಲ್ಲದ) ಸುಖವನ್ನು ಪಡೆಯುತ್ತಾನೆ. ಬ್ರಹ್ಮಯೋಗದಿಂದ ಕೂಡಿದ ಆತ್ಮವುಳ್ಳ ಆ ಯೋಗಿಯು

ಅಕ್ಷಯವಾದ ಸುಖವನ್ನು ಪಡೆಯುತ್ತಾನೆ."

### ತಾನಿಲ್ಲ, ತನ್ನದೆಂಬುದಿಲ್ಲ

ಬಾಹ್ಯವಸ್ತು, ವ್ಯಕ್ತಿಗಳಲ್ಲಿ ಶ್ರೀರಾಮಕೃಷ್ಣರಿಗೆ ಆಸಕ್ತಿಯಿರಲಿಲ್ಲವಾದರೂ ತಮ್ಮ ಕೋಣೆಯಲ್ಲಿದ್ದ ವಸ್ತುಗಳನ್ನು ಶುಭ್ರವಾಗಿ, ಅಚ್ಚುಕಟ್ಟಾಗಿ ನಿಗದಿತ ಸ್ಥಳದಲ್ಲೇ ಇಡುತ್ತಿದ್ದರು. ಇದ್ದ ಕೆಲವೇ ಬಟ್ಟೆಗಳನ್ನೂ ಶುಭ್ರವಾಗಿ ಧರಿಸುತ್ತಿದ್ದರು. ಹಣವನ್ನು ಅವರಿಂದ ಮುಟ್ಟಲಾಗುತ್ತಿರಲಿಲ್ಲ. ಆಕಸ್ಮಿಕವಾಗಿ ಮುಟ್ಟಿದರೂ ಶರೀರವೇ ಪ್ರತಿಭಟಿಸಿ ಯಾತನೆಯನ್ನು ಅನುಭವಿಸುತ್ತಿದ್ದರು. ಅಂತೆಯೇ ಯಾವುದೇ ವಸ್ತುವನ್ನು ಸಂಗ್ರಹಿಸುವುದೂ ಅವರಿಂದ ಸಾಧ್ಯವಿರಲಿಲ್ಲ. ಅಡಿಕೆಯ ಚೂರುಗಳನ್ನು ಕೂಡ ನಾಳೆಗೆ ಆಗುವುದೆಂದು ಇಡಲು ಪ್ರಯತ್ನಿಸಿ ವಿಫಲರಾದರು. ಅಷ್ಟು ಆಳವಾಗಿ ವಿಷಯವಸ್ತುಗಳ ಬಗೆಗೆ ಅವರಲ್ಲಿ ವೈರಾಗ್ಯ ಮನೆಮಾಡಿತ್ತು. ಅವರ ಹೆಸರಿನಲ್ಲಿ ಒಂದಿಷ್ಟು ಹಣವನ್ನು ಠೇವಣಿಯಾಗಿಟ್ಟು ಅವರಿಗೆ ಕೊರತೆಯಿರದಂತೆ ಮಾಡಬೇಕು ಎಂದು ಒಬ್ಬ ಧನಿಕ ಮಾರ್ವಾಡಿ ಭಕ್ತ ಬಯಸಿದಾಗ ಅವನಿಗೆ ಸಿಕ್ಕಿದ್ದು ತಿರಸ್ಕಾರ. ಶ್ರೀರಾಮಕೃಷ್ಣರಿಗೆ ಕೊರತೆಯ ಭಾವನೆ ಇದ್ದರೆ ತಾನೇ ಅದನ್ನು ನೀಗಿಸುವ ಪ್ರಶ್ನೆ ಉದ್ಭವಿಸುವುದು. ಜಗನ್ಮಾತೆಯಲ್ಲಿಯೇ ತಮ್ಮ ಸರ್ವಸ್ವವನ್ನೂ ಕಂಡುಕೊಂಡಿದ್ದ ಅವರಿಗೆ ಬೇರೆ ಅಸ್ತಿತ್ವವೇ ಇರಲಿಲ್ಲ. ಒಂದು ದಿಂಬಿನ ಒಳಗೆ ಇರುವ ಹತ್ತಿಯಂತೆ ಅವರಲ್ಲಿ ಸಂಪೂರ್ಣವಾಗಿ ಆ ತಾಯಿಯೇ ಅಡಕವಾಗಿದ್ದಳು. ಹೊರಗಿನ ವಸ್ತುವಿನಿಂದ ಅವರಿಗೆ ದೊರೆಯುವಂತಹದ್ದು ಏನೂ ಇರಲಿಲ್ಲ. ಸಾಮಾನ್ಯರಿಗೆ ಯಾವುದರಲ್ಲಿ ಸುಖ, ಆನಂದ ಕಾಣುವುದೋ ಅಂತಹ ವಸ್ತುವಿನಲ್ಲೂ ಅವರು ಒಂದೇ ಅಸ್ತಿತ್ವವನ್ನು ಕಾಣುತ್ತಿದ್ದರಿಂದ ಕಲ್ಪಿತ ಸುಖಗಳು ಮೋಹ ಒಡ್ಡಲಿಲ್ಲ.

ದೇವಸ್ಥಾನದ ಮೇಲ್ವಿಚಾರಕ ಇಲ್ಲಿಂದ ಹೋಗಲು ನಿಮಗೆ ಹೇಳಿದ್ದಾನೆ  ಎಂದು ಒಬ್ಬ ನೌಕರ ಬಂದು ಹೇಳಿದಾಗ ಮರುಮಾತಿಲ್ಲದೆ, ವಿಷಾದವಿಲ್ಲದೆ, ದೀರ್ಘಕಾಲ ತಪಸ್ಸು ಸಾಧನೆಗಳನ್ನು ಮಾಡಿ ಆ ದೇವಸ್ಥಾನಕ್ಕೇ ಶೋಭೆ, ಕೀರ್ತಿಯನ್ನು ತಂದಿದ್ದ ಶ್ರೀರಾಮಕೃಷ್ಣರು ಉಟ್ಟಬಟ್ಟೆಯಲ್ಲೇ ಹೊರನಡೆದರು. ಅನಂತರ ಅಪರಾಧವಾಯಿತೆಂದು ಕ್ಷಮೆ ಕೋರಿ ಹಿಂತಿರುಗಬೇಕೆಂದು ಕೇಳಿಕೊಂಡಾಗ ಎಂದಿನಂತೆ ವಾಸಮಾಡಲು ತೊಡಗಿದರು. ಸ್ಥಳ, ವ್ಯಕ್ತಿಗಳಿಗೂ ಅವರು ಅಂಟಿಕೊಂಡಿರಲಿಲ್ಲ ಎಂಬುದಕ್ಕೆ ಇದೇ ಸಾಕ್ಷಿ.

### ಪೊಳ್ಳು ಅಭಿಮಾನದ ತ್ಯಾಗ

ಅಹಂಕಾರವನ್ನು ನಿರ್ಮೂಲ ಮಾಡುವುದು ಅಸಾಧ್ಯವೇ ಸರಿ ಎಂದು ಪುನಃ ಪುನಃ ಶ್ರೀರಾಮಕೃಷ್ಣರು ಹೇಳುತ್ತಿದ್ದರು. ಅದು ಹೇಗಾದರೂ ಯಾವುದೋ ರೂಪದಲ್ಲಿ  ಉಳಿದುಕೊಂಡುಬಿಡುವುದು. ಅಶ್ವತ್ಥವೃಕ್ಷವನ್ನು ಕಡಿದು ಹಾಕಿದರೆ ಮಾರನೆಯ ದಿವಸವೇ ಮತ್ತೆ ಚಿಗುರು ಬಂದಿರುವುದನ್ನು ಕಾಣಬಹುದು ಎನ್ನುತ್ತಿದ್ದರು. ಈ ಅಹಂಕಾರವನ್ನು ನಾಶಮಾಡಲು ಅವರು ಮಾಡಿದ ಸಾಧನೆ ಅಪೂರ್ವವಾದದ್ದು. ತಾನು ಬ್ರಾಹ್ಮಣ, ಉಚ್ಚಕುಲದವನು ಎಂಬ ಅಭಿಮಾನವನ್ನು ತ್ಯಜಿಸಲು ತಮ್ಮ ಜನಿವಾರವನ್ನು ತೆಗೆದುಹಾಕಿ ಧ್ಯಾನ ಮಾಡುತ್ತಿದ್ದರು. ದೇವಸ್ಥಾನದ ಕಸ ಗುಡಿಸಿ, ಹೇಸಿಗೆಯನ್ನು ಶುಚಿಮಾಡುತ್ತಿದ್ದ ರಸಿಕನೆಂಬ ಅಂತ್ಯಜನ ಶೌಚಾಲಯವನ್ನು ರಾತ್ರಿಯ ಹೊತ್ತು ತಮ್ಮ ತಲೆಯ ಕೂದಲಿನಿಂದ ಉಜ್ಜಿ ಶುಚಿಮಾಡುತ್ತಿದ್ದರು. ಭಿಕ್ಷುಕರು ಉಂಡುಹೋದ ಎಲೆಗಳಿಂದ ತಿಂದು ಅವುಗಳನ್ನು ತೆಗೆದು ಸ್ವಚ್ಛಮಾಡುತ್ತಿದ್ದರು. ಇಂತಹ ಅಸಾಧಾರಣವಾದ ಸಾಧನೆಯಿಂದ ತಮ್ಮಲ್ಲಿ ವಿನಯ ಹಾಗೂ ನಿರಭಿಮಾನವನ್ನು ರೂಢಿಸಿಕೊಂಡರು.

### ಜ್ಞಾನದಲ್ಲೂ ಮುಕ್ತಹಸ್ತ

ಇಂದಿನ ಮಾಹಿತಿ-ತಂತ್ರಜ್ಞಾನದ  ಯುಗದಲ್ಲಿ ಯಾವುದೂ ಉಚಿತವಲ್ಲ. ಎಲ್ಲವನ್ನೂ ಮಾರಾಟ ಮಾಡುತ್ತೇವೆ. ನಾವು ಕಷ್ಟಪಟ್ಟು ಸಾಧನೆಗೈದು ಕಲೆ, ಸಂಗೀತ, ಕ್ರೀಡೆಗಳನ್ನು ಕಲಿತು ಹಣಕ್ಕಾಗಿ ಮಾರಾಟ ಮಾಡುವ ಕಸುಬುಗಳನ್ನಾಗಿ ಪರಿವರ್ತಿಸಿಕೊಳ್ಳುತ್ತೇವೆ. ಕಂಪ್ಯೂಟರ್ ಕಾರ್ಯಕ್ರಮಗಳನ್ನು ಧ್ವಂಸಮಾಡುವ ವೈರಸ್‌ಗಳನ್ನು ಸೃಷ್ಟಿಸಿ ಸಾವಿರಾರು ಜನರಿಗೆ ನಷ್ಟವುಂಟುಮಾಡಿ ತನ್ಮೂಲಕ ಹಣ ಗಳಿಸುವ ಪ್ರತಿಭಾವಂತರಿದ್ದಾರೆ! ಶಾಲೆ ಕಾಲೇಜುಗಳಲ್ಲೂ ಅಧ್ಯಾಪಕರು ಸರಿಯಾಗಿ ಪಾಠಮಾಡದೆ ವಿದ್ಯಾರ್ಥಿಗಳು ಮನೆಪಾಠಕ್ಕೆ ಬರುವಂತೆ ಒತ್ತಾಯಿಸುತ್ತಾರೆ. ಅಮೂಲ್ಯವಾದ ಔಷಧವನ್ನು ಕಂಡುಹಿಡಿದು ಅದಕ್ಕೆ ಅತ್ಯಂತ ಹೆಚ್ಚು ಬೆಲೆ ಬರುವವರೆಗೂ ಮಾರುಕಟ್ಟೆಯಲ್ಲಿ ಅದು ಸಿಗದಂತೆ ಮಾಡಿ ಅಮಾನವೀಯತೆಯನ್ನು ಪ್ರದರ್ಶಿಸುವವರೂ ಉಂಟು. ಬೌದ್ಧಿಕ ಸ್ವಾಮ್ಯತೆಗಾಗಿ (intellectual rights) ಹೋರಾಡಿ  ಅಲ್ಲಿಯೂ  ಸ್ವಾರ್ಥವನ್ನು ಮೆರೆಯುವುದು ಇಂದು ಕಾಣಬಹುದಾಗಿದೆ.

ಈ ಸಂದರ್ಭದಲ್ಲಿ, ಜ್ಞಾನದ ಬಗ್ಗೆ ಶ್ರೀರಾಮಕೃಷ್ಣರಿಗೆ ಇದ್ದ ಮನೋಭಾವ ನಮ್ಮ ಕಣ್ತೆರೆಸಬೇಕು. ವಸ್ತು, ಸ್ಥಳ, ವ್ಯಕ್ತಿಗಳ ಮೇಲಿನ ವ್ಯಾಮೋಹ ಹೋದರೂ, ಅಹಂಕಾರವನ್ನು ಬೇರುಸಹಿತ ಕಿತ್ತುಹಾಕಿದ್ದರೂ ಸಾಧನೆಯಿಂದ ಗಳಿಸಿರುವ ಜ್ಞಾನವನ್ನು ಇತರರಿಗೆ ನೀಡದೆ ತಾವು ಕಂಡುಕೊಂಡಂತಹ ಸತ್ಯಗಳನ್ನೂ ವಿಚಾರಗಳನ್ನೂ ಶ್ರೀರಾಮಕೃಷ್ಣರು ತಮ್ಮಲ್ಲೇ ಇಟ್ಟುಕೊಳ್ಳಬಹುದಿತ್ತು. ಬದಲಾಗಿ ಶಿಷ್ಯರನ್ನು ಅರಸುತ್ತ ತಮಗೆ ತಿಳಿದಿರುವುದನ್ನೆಲ್ಲ ಅವರಿಗೆ ತಿಳಿಸಬೇಕು ಎಂದು ಹಂಬಲಿಸುತ್ತಿದ್ದರು. ಹಾಗೆ ತಮ್ಮಿಂದ ಉನ್ನತ ವಿಚಾರಗಳನ್ನೂ ಉನ್ನತ ಜೀವನವನ್ನೂ ಪಡೆದವರಿಂದ ಪ್ರತಿಯಾಗಿ ಏನನ್ನೂ ಬಯಸಿದವರಲ್ಲ. ಇದು ನನ್ನ ವಿಚಾರ, ನನ್ನಿಂದ ಬಂದಿರುವ ಹೊಸ ಆಲೋಚನೆ, ಇದನ್ನು ಕೇಳು ಎನ್ನುವ ಧೋರಣೆಯಿಲ್ಲ. ಕೇಶವಚಂದ್ರ ಸೇನ ಮುಂತಾದ ಪ್ರಸಿದ್ಧ ವಾಗ್ಮಿಗಳು, ಚಿಂತಕರು, ಇವರ ವಿಚಾರಗಳನ್ನು ಬಳಸಿ ಮತ್ತಷ್ಟು ಪ್ರಸಿದ್ಧರಾದರೂ ಇವರಿಗೆ ಅಸೂಯೆ, ಕಸಿವಿಸಿಯಾಗಲಿಲ್ಲ. ಕಷ್ಟಪಟ್ಟು ಗಳಿಸಿದ ಆಧ್ಯಾತ್ಮಿಕ ಸಂಪತ್ತನ್ನೂ ಕೂಡ ನರೇಂದ್ರನಿಗೆ ಧಾರೆಯೆರೆದು ಫಕೀರನಾದೆ ಎಂದು ಹೇಳುತ್ತಾರೆ ಶ್ರೀರಾಮಕೃಷ್ಣರು.

ಇಂತಹ ಪರಿಪೂರ್ಣ ತ್ಯಾಗವನ್ನು ಜೀವನದಲ್ಲಿ ತೋರಿದ ಪರಮಹಂಸರು ಇಂದಿನ ಜಗತ್ತಿನಲ್ಲಿ ಸ್ವಾರ್ಥಪರತೆಯಿಂದ ಹುಟ್ಟಿರುವ ಸಮಸ್ಯೆಗಳಿಗೆ ಪರಿಹಾರವಾಗಿ ಕಂಗೊಳಿಸುತ್ತಾರೆ. ಹಣದಿಂದಲೇ ಎಲ್ಲ ಹಾಗೂ ಎಲ್ಲವೂ ತನಗೇ ಇರಬೇಕು ಎಂಬ ಸ್ವಾರ್ಥದ ಸುಳಿಗೆ ಸಿಕ್ಕಿದ ಈ ಪ್ರಪಂಚದ ಅಧಃಪತನವನ್ನು ತಡೆಯಬಲ್ಲ ಶಕ್ತಿ ಇವರಿಗಿದೆ. ತಿಳಿದವರ ಹಿತನುಡಿಯನ್ನು ಆಲಿಸುವ ಮನಸ್ಸುಳ್ಳವರು,ಇದನ್ನು ತಿಳಿದುಕೊಳ್ಳುವವರು ಬೇಕಷ್ಟೆ!